MARCH 30, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು**

<><><>

- **ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿ ಗತಿ ಬಗ್ಗೆ, ಸಮಗ್ರ ಅಧ್ಯಯನ ವರದಿ, ಶೀಘ್ರ ಮುಖ್ಯಮಂತ್ರಿಯವರಿಗೆ ಸಲ್ಲಿಕೆ – ಸಚಿವ ಎಂ.ಸಿ. ಸುಧಾಕರ್.**
- **ಕೌಶಲ, ಜ್ಞಾನ ಮತ್ತು ಉದ್ಯಮಶೀಲತೆ; ಸ್ಟಾರ್ಟಅಪ್ ಇನ್‌ಕ್ಯುಬೇಶನ್ ವಾಣಿಜ್ಯಿಕ ಮಾದರಿಗೆ, ಆಧಾರ – ಉಪ ಕುಲಪತಿ ಪಿ.ಎಲ್. ಪಾಟೀಲ.**
- **ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ, ಹುಲಿಗಳ ಸಂಖ್ಯೆ 408 ರಿಂದ 393ಕ್ಕೆ ಇಳಿಕೆ.**
- **ಇಂದು ಯುಗಾದಿ ಹಬ್ಬ; ನಾಡಿನಾದ್ಯಂತ ಸಂಭ್ರಮ, ಗಣ್ಯರ ಶುಭಾಶಯ.**

<><><>

**<u>ಈಗ ವಾರ್ತೆಗಳ ವಿವರ</u>**

<><><>

**ರಾಜ್ಯದ ವಿಶ್ವವಿದ್ಯಾಲಯಗಳ ಪ್ರಸ್ತುತ ಸ್ಥಿತಿ ಗತಿಗಳ ಬಗ್ಗೆ, ಸಮಗ್ರ ಅಧ್ಯಯನ ನಡೆಯುತ್ತಿದೆ. ಶೀಘ್ರದಲ್ಲಿ ಆ ವರದಿ ಮುಖ್ಯಮಂತ್ರಿಯವರಿಗೆ ಸಲ್ಲಿಸಲಾಗುವುದು, ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ. ಸುಧಾಕರ್ ತಿಳಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ 43ನೇ ಘಟಿಕೋತ್ಸವದಲ್ಲಿ, ಸಮ ಕುಲಾಧಿಪತಿಯಾಗಿ ಪಾಲ್ಗೊಂಡು, ಅವರು ಮಾತನಾಡಿದರು. ರಾಜ್ಯದ ಎಲ್ಲ ವಿಶ್ವ ವಿದ್ಯಾಲಯಗಳಲ್ಲಿ, ಆರ್ಥಿಕ ಮತ್ತು ಆಡಳಿತಾತ್ಮಕ ಶಿಸ್ತು ತರಲು, ವಿಶೇ ’ ಒತ್ತು ನೀಡಲಾಗಿದೆ. 2 ಸಾವಿರದ 800ಕ್ಕೂ ಹೆಚ್ಚು ಬೋಧಕರ ಹುದ್ದೆಗಳನ್ನು, ಹಂತ ಹಂತವಾಗಿ ಭರ್ತಿ ಮಾಡಲಾಗುವುದು, ಎಂದರು.**

<><><>

**ವಿಜ್ಞಾನ, ಮಾನವಿಕ ವಿಜ್ಞಾನ, ಕಲೆ ಮತ್ತು ವಾಣಿಜ್ಯ ನಿಕಾಯದ, ಪದವಿ ಕಾಲೇಜುಗಳಲ್ಲಿ, ‘ಸ್ಟಾರ್ಟ್ ಅಪ್ ಇನ್ಕ್ಯೂಬೇಟರ್’ ಸ್ಥಾಪಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ನವೋದ್ಯಮ ಆರಂಭಿಸಲು, ಸರ್ಕಾರದಿಂದ ಅಗತ್ಯ ಸಹಾಯ ದೊರೆಯುತ್ತದೆ ಎಂದು, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಪಿ.ಎಲ್. ಪಾಟೀಲ ತಿಳಿಸಿದ್ದಾರೆ. 5 ದಿನಗಳ ಕಾಲ, ವಿಶ್ವವಿದ್ಯಾಲಯದಲ್ಲಿ ಜರುಗಿದ, ಅಧ್ಯಾಪಕರ ವೃತ್ತಿ ಪುನಃಶ್ಚೇತನ ಶಿಬಿರದ, ಸಮಾರೋಪದಲ್ಲಿ ಅವರು ಮಾತನಾಡಿದರು. ಕೌಶಲ, ಜ್ಞಾನ ಮತ್ತು ಉದ್ಯಮಶೀಲತೆ ಆಧಾರವಾಗಿಟ್ಟುಕೊಂಡು, ಸ್ಟಾರ್ಟ ಅಪ್ ಇನ್‌ಕ್ಯುಬೇಶನ್ ಸೆಂಟರ್‌ಗಳನ್ನು ಸ್ಥಾಪಿಸಿ, ವ್ಯವಹಾರ ಮತ್ತು ಲಾಭದಾಯಕ ಮಾದರಿಯಾಗಿ ಪರಿವರ್ತಿಸುವಲ್ಲಿ, ಅಗ್ರಿ ಬ್ಯುಸಿನೆಸ್ ನವೋದ್ಯಮಗಳು ಮಾದರಿಯಾಗಿವೆ ಎಂದರು.**

<><><>

ಜರ್ಮನಿಯ ಲಿಂಡೌ ನಲ್ಲಿ, ಜೂನ್ 29 ರಿಂದ ಜುಲೈ 4ರ ವರೆಗೆ, ರಸಾಯನಶಾಸ್ತ್ರದಲ್ಲಿ ನೊಬೆಲ್ ಪುರಸ್ಕೃತರ 74ನೇ ಅಂತಾರಾಷ್ಟ್ರೀಯ ದುಂಡು ಮೇಜಿನ ಸಭೆ ನಡೆಯಲಿದೆ. ಬಳ್ಳಾರಿಯ ವಿಜಯನಗರ ಶ್ರೀ ಕೃ ಷ್ಣದೇವರಾಯ ವಿಶ್ವವಿದ್ಯಾಲಯದ, ರಸಾಯನಶಾಸ್ತ್ರ ವಿಭಾಗದ, ಸಂಶೋಧನಾ ವಿದ್ಯಾರ್ಥಿಗಳಾದ, ಗೌತಮಿ ಪಾಟೀಲ ಹಾಗೂ ನಸೀಮ್ ಕೌಸರ್, ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ಯುವ ರಸಾಯನ ಶಾಸ್ತ್ರಜ್ಞೆ, ಬಳ್ಳಾರಿಯ ಗೌತಮಿ ಪಾಟೀಲ.

<><><>

ಗೌತಮಿ ಪಾಟೀಲ ಧ್ವನಿ 44 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ, ಕಾರವಾರದ 'ಸಿಬರ್ಡ್ ನೌಕಾ ನೆಲೆ'ಗೆ ಭೂಮಿ ಒದಗಿಸಿದ, 57 ನಿರಾಶ್ರಿತ ಕುಟುಂಬಗಳಿಗೆ, 10 ಕೋಟಿ 47 ಲಕ್ಷ ರೂಪಾಯಿ ಪರಿಹಾರವನ್ನು ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್ ಮುತುವರ್ಜಿವಹಿಸಿ, ಬಿಡುಗಡೆ ಮಾಡಿದ್ದಾರೆ ಎಂದು, ಸಂಸದ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದ್ದಾರೆ. ಅಮದಳ್ಳಿ, ಕೊಡಾರ, ಹಟ್ಟಿಕೇರಿ, ಬಿಣಗಾ, ಚೆಂಡಿಯಾ ಹಾಗೂ ಬಿರಾಡೆ ಈ ಗ್ರಾಮಗಳ ನಿರಾಶ್ರಿತರಿಗೆ ಹಣ ಬಿಡುಗಡೆಯಾಗಿದೆ; ಉಳಿದ ಪ್ರಕರಣಗಳಲ್ಲೂ ಹಂತ ಹಂತವಾಗಿ ಪರಿಹಾರವನ್ನು ಬಿಡುಗಡೆಯಾಗಲಿದೆ ಎಂದು ಅವರು ಹೇಳಿದ್ದಾರೆ.

<><><>

210 ಹಾಸಿಗೆಗಳ ಸಾಮರ್ಥ್ಯದ, ಕಿದ್ವಾಯಿ ಕ್ಯಾನ್ಸರ್ ಚಿಕಿತ್ಸೆ ಆಸ್ಪತ್ರೆ ನಿರ್ಮಾಣಕ್ಕೆ, ಕಲಬುರಗಿಯಲ್ಲಿ, ಒಂದೂವರೆ ಎಕರೆ ಜಾಗೆಯನ್ನು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ ಪರಿಶೀಲಿಸಿದ್ದಾರೆ. 76 ಕೋಟಿ ರೂಪಾಯಿ ವೆಚ್ಚದಲ್ಲಿ, ನೂತನ ಕ್ಯಾನ್ಸರ್ ಚಿಕಿತ್ಸೆ ಆಸ್ಪತ್ರೆಗೆ, ಏಪ್ರಿಲ್ 16 ರಂದು ಭೂಮಿ ಪೂಜೆ ನಡೆಯಲಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಎ.ಐ.ಸಿ.ಸಿ. ಅಧ್ಯಕ್ಷರು, ಪಾಲ್ಗೊಳ್ಳಲಿದ್ದಾರೆ ಎಂದರು. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ 25 ಕೋಟಿ ರೂಪಾಯಿ ಹಾಗೂ ಕಿದ್ವಾಯಿ ಆಸ್ಪತ್ರೆ 10 ಕೋಟಿ ರೂಪಾಯಿ ನೀಡಲಿವೆ, ಎಂದು ಸಚಿವರು ತಿಳಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ರಾಷ್ಟ್ರೀಯ ಮಟ್ಟದಲ್ಲಿ, ಪ್ರತಿ 4 ವರ್ಷಗಳಿಗೊಮ್ಮೆ, ಹುಲಿ ಆವಾಸಗಳಲ್ಲಿ ಗಣತಿ ಕಾರ್ಯ ನಡೆಸುತ್ತದೆ. ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ, ಹುಲಿಗಳ ಸಂಖ್ಯೆ 408 ರಿಂದ 393ಕ್ಕೆ ಇಳಿಕೆಯಾಗಿದೆ.

<><><>

ಬೆಂಗಳೂರಿನ ಹೊಳೆಮತ್ತಿ ನೇಚರ್ ಫೌಂಡೇಷನ್ ಸಂಸ್ಥೆಯ ಹಿರಿಯ ವಿಜ್ಞಾನಿ ಹಾಗೂ ಸಂರಕ್ಷಣಾ ತಜ್ಞ ಡಾಕ್ಟರ್ ಸಂಜಯ್ ಗುಬ್ಬಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಡಾಕ್ಟರ್ ಸಂಜಯ್ ಗುಬ್ಬಿ ಧ್ವನಿ 45 ಸೆಕೆಂದುಗಳು

<><><>

ಯುಗದ ಆದಿ, ಯುಗಾದಿ. ಯುಗವೆಂದರೆ ಸೃಷ್ಟಿಯ ಕಾಲಮಾನ; ಅರ್ಥಾತ್, ಹೊಸ ವರ್ಷ. ಆದಿ ಎಂದರೆ ಆರಂಭ. ಹೊಸ ಯುಗದ, ಹೊಸ ವರ್ಷದ ಆರಂಭ. ಇಂದು, ಕಲಿಯುಗಾಬ್ದ 5127 ಶ್ರೀ ಶಾಲಿವಾಹನ ಶಕೆ, 1948 ವಿಶ್ವಾವಸುನಾಮ ಸಂಸವತ್ಸರ, ಉತ್ತರಾಯಣ, ಚೈತ್ರ ಮಾಸದ, ಶುಕ್ಲ ಪಕ್ಷದ ಪಾಡ್ಯಮಿ.

<><><>

ಹೊಸ ವರ್ಷದ ಪ್ರಥಮ ಹಬ್ಬ, ಯುಗಾದಿಯನ್ನು, ನಾಡಿನಾದ್ಯಂತ ಸಂಭ್ರಮ, ಸಡಗರದಿಂದ ಆಚರಿಸಲಾಗುತ್ತಿದೆ. ಗಣ್ಯರು ಶುಭಾಶಯ ಕೋರಿದ್ದಾರೆ.

<><><>

ದಕ್ಷಿಣ ಭಾರತೀಯರು, ಚಾಂದ್ರಮಾನವನ್ನು ಅನುಸರಿಸಿ, ಉತ್ತರ ಭಾರತದವರು ಸೌರಮಾನ ಯುಗಾದಿಯನ್ನು ಆಚರಿಸುತ್ತಾರೆ.

<><><>

ಮಹಾರಾಷ್ಟ್ರದಲ್ಲಿ 'ಗುಡಿ ಪಾಡವಾ', ಉತ್ತರ ಭಾರತದಲ್ಲಿ 'ಬೈಸಾಖಿ' ಎಂದು ಯುಗಾದಿ ಆಚರಿಸಲ್ಪಡುತ್ತದೆ.

<><><>

ಜನಪದರ ದೃಷ್ಟಿಯಲ್ಲಿ, ಯುಗಾದಿ ಆಚರಣೆ ವೈಶಿಷ್ಟ್ಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ಜಾನಪದ ವಿದ್ವಾಂಸ ಡಾಕ್ಟರ್ ರಾಮಣ್ಣ ಮೂಲಗಿ.

<><><>

ಡಾ. ರಾಮಣ್ಣ ಮೂಲಗಿ ಧ್ವನಿ 30 ಸೆಕೆಂದುಗಳು

<><><>

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿ, ಧಾರವಾಡ ಜಿಲ್ಲೆಯ 2 ಸಾವಿರದ 244 ಹೆಕ್ಟರ್ ಕೃಷಿ ಜಮೀನಿಗೆ, 50, ಮೇಲ್ಪೈ ಸಣ್ಣ ನೀರಾವರಿ ಯೋಜನೆಗಳಾದ, ಚೆಕ್ ಡ್ಯಾಮ್, ಬ್ಯಾರೇಜ್ ಮತ್ತು ಬಂದರು ನಿರ್ಮಾಣ ಕಾರ್ಯಗಳಿಗೆ, ಕೇಂದ್ರ ಜಲ ಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ್ ಅನುಮೋದಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ತಮ್ಮ ಮನವಿಗೆ ಸ್ಪಂದಿಸಿ, ಯುಗಾದಿ ಹಬ್ಬಕ್ಕೆ ಧಾರವಾಡ ಜಿಲ್ಲೆಯ ರೈತರಿಗೆ, ವಿಶೇಷ ಕೊಡುಗೆ ನೀಡಿದ್ದಕ್ಕಾಗಿ, ಅಭಿನಂದಿಸಿದ್ದಾಗಿ, ತಿಳಿಸಿದ್ದಾರೆ.

<><><>

76 ಕೋಟಿ ರೂಪಾಯಿ ಮೊತ್ತದ ಯೋಜನೆಗೆ, ಕೇಂದ್ರ ಸರ್ಕಾರ 45 ಕೋಟಿ 81 ಲಕ್ಷ ರೂಪಾಯಿ ಅನುದಾನ ನೀಡಲಿದೆ. ಆರು ಸಾವಿರ ರೈತರಿಗೆ, ಮುಂಗಾರು ಮತ್ತು ಹಿಂಗಾರು ಮಳೆ ನೀರು ಶೇಖರಣೆ ಹಾಗೂ ಬಳಕೆಗೆ ಅನುವಾಗಲಿದೆ.

<><><>

ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮ, 'ಮನ್ ಕಿ ಬಾತ್' ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಇದು ಮನದ ಮಾತಿನ 120ನೇ ಸಂಚಿಕೆಯಾಗಿದೆ. ಹಿಂದಿ ಅವತರಣಿಕೆಯ ನಂತರ, ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮ ಬಿತ್ತರವಾಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

**ಬೆಳಗಾವಿ ಜಿಲ್ಲೆ, ಬೈಲಹೊಂಗಲದ, ವೀರರಾಣಿ ಕಿತ್ತೂರು ಚೆನ್ನಮ್ಮನವರ ಸಮಾಧಿಯನ್ನು, ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವಂತೆ, ಪ್ರಧಾನಮಂತ್ರಿಯವರಿಗೆ, ಸಿದ್ದರಾಮಯ್ಯ, ಪತ್ರ ಬರೆದಿದ್ದಾರೆ.**

<><><>

**ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯಡಿ, ಮಂಡ್ಯ ಜಿಲ್ಲೆಯಲ್ಲಿ 128 ತಂಡಗಳಲ್ಲಿ, ಒಟ್ಟು 3 ಸಾವಿರದ 917 ಜನರಿಗೆ, ವೃತ್ತಿ ತರಬೇತಿ ನೀಡಲಾಗಿದೆ ಎಂದು, ಜಿಲ್ಲಾಧಿಕಾರಿ ಕುಮಾರ ತಿಳಿಸಿದ್ದಾರೆ.**

<><><>